ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	820
ಸದಸ್ಯರ ಹೆಸರು	:	ಶ್ರೀ. ಕಾಂತರಾಜ್ (ಬಿಎಂಎಲ್)
ಉತ್ತರಿಸಬೇಕಾದ ದಿನಾಂಕ	:	17.12.2018
ಉತ್ತರಿಸುವ ಸಚಿವರು	:	ಕೃಷಿ ಸಚಿವರು

ಪ್ರಶ್ನೆ	ಉತ್ತರ
ಅ) 2017-18ನೇ ಸಾಲಿಗೆ ತೋಟಗಾರಿಕೆ ಬೆಳೆಗಳಿಗೆ ಫಸಲ್ ಭೀಮಾ ಬೆಳೆ ವಿಮಾ ಯೋಜನೆಯಡಿ ತುಮಕೂರಿಗೆ ಬಂದ ಅನುದಾನವೆಷ್ಟು;	ತುಮಕೂರು ಜಿಲ್ಲೆಗೆ 2017ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ತೋಟಗಾರಿಕೆ ಬೆಳೆಗಳಿಗೆ ಲೆಕ್ಕ ಹಾಕಲಾದ ವಿಮೆ ಪರಿಹಾರ ಮೊತ್ತ ರೂ.30.50 ಲಕ್ಷಗಳು. ಸದರಿ ಸಾಲಿನ ಹಿಂಗಾರು ಹಂಗಾಮಿನಲ್ಲಿ ತೋಟಗಾರಿಕೆ ಬೆಳೆಗಳಿಗೆ ಯಾವುದೇ ರೈತರು ನೋಂದಣಿಯಾಗಿರುವುದಿಲ್ಲ.
ಆ) ಈ ಅನುದಾನದಲ್ಲಿ ಬೆಳೆ ನಷ್ಟ ಅನುಭವಿಸಿದ ರೈತರಿಗೆ ಆ ವರ್ಷದ ವಿಮಾ ಯೋಜನೆಯ ಹಣವನ್ನು ನೀಡಲಾಗಿದೆಯೇ; (ತಾಲ್ಲೂಕುವಾರು ವಿವರ ನೀಡುವುದು)	ತುಮಕೂರು ಜಿಲ್ಲೆಯಲ್ಲಿ ಪ್ರಧಾನಮಂತ್ರಿ ಫಸಲ್ ಬೀಮಾ (ವಿಮಾ) ಯೋಜನೆಯಡಿ 2017ರ ಮುಂಗಾರು ಹಂಗಾಮಿನಲ್ಲಿ ಟೊಮ್ಯಾಟೊ(ಎನ್.ಎಸ್), ಈರುಳ್ಳಿ (ನೀ), ಮೆಣಸಿನಕಾಯಿ (ನೀ) ಮತ್ತು ಮೆಣಸಿನಕಾಯಿ (ಮ.ಆ.) ಬೆಳೆಗೆ ರೂ.30.50 ಲಕ್ಷಗಳ ಬೆಳೆ ವಿಮೆ ಪರಿಹಾರ ಮೊತ್ತವನ್ನು ಲೆಕ್ಕಾಚಾರ ಮಾಡಲಾಗಿರುತ್ತದೆ. ಸದರಿ ಬೆಳೆಗಳಿಗೆ ವಿತರಿಸಲಾದ ಒಟ್ಟು ಬೆಳೆ ವಿಮೆ ಪರಿಹಾರದ ಮೊತ್ತ ರೂ.25.31 ಲಕ್ಷಗಳು. ತಾಲ್ಲೂಕುವಾರು ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ.
ಇ) 2017-18ನೇ ಸಾಲಿಗೆ ವಿಮಾ ಯೋಜನೆಯಲ್ಲಿ ಬಾಕಿ ನೀಡಬೇಕಾಗಿರುವ ಹಣವೆಷ್ಟು; ಈ ಹಣವನ್ನು ಯಾವಾಗ ನೀಡಲಾಗುವುದು? (ವಿವರ ನೀಡುವುದು)	2017-18ನೇ ಸಾಲಿನಲ್ಲಿ ಪ್ರಧಾನಮಂತ್ರಿ ಫಸಲ್ ಬೀಮಾ (ವಿಮಾ) ಯೋಜನೆಯಡಿ 2017ರ ಮುಂಗಾರು ಹಂಗಾಮಿನಲ್ಲಿ ಒಟ್ಟು ರೂ.5.185 ಲಕ್ಷಗಳ ಬೆಳೆ ವಿಮೆ ಪರಿಹಾರ ಮೊತ್ತವನ್ನು ತೋಟಗಾರಿಕೆ ಬೆಳೆಗಳಿಗೆ ವಿತರಿಸಲು ಬಾಕಿ ಇರುತ್ತದೆ. ವಿಮಾ ಘಟಕಗಳಲ್ಲಿನ ವಿಮಾಸಂಸ್ಥೆಗಳು ಬೆಳೆ ಕಟಾವು ಪ್ರಯೋಗಗಳ ಮೂಲಕ ಪಡೆಯಲಾದ ಇಳುವರಿ ಮಾಹಿತಿಯ ಕುರಿತು ಆಕ್ಷೇಪಣೆಯನ್ನು ವ್ಯಕ್ತಪಡಿಸಿರುವುದರಿಂದ, synthetic yieldನ ಮಾಹಿತಿ ಪಡೆಯಲು ಕೇಂದ್ರ ಸರ್ಕಾರದ ಅಂಗ ಸಂಸ್ಥೆಯಾದ MNCFCಗೆ ಮಾಹಿತಿ ನೀಡಲು ಕೋರಿದ್ದು, ಅವರಿಂದ ಮಾಹಿತಿ ಬಂದ ನಂತರ ಇಳುವರಿಗೆ ಅನುಗುಣವಾಗಿ ಲೆಕ್ಕಾಚಾರ ಮಾಡಿ ಬೆಳೆ ವಿಮೆ ಪರಿಹಾರ ಮೊತ್ತ ವಿತರಿಸಲಾಗುವುದು.

ಕೃಇ 124 ಕೃಕೈಉ 2018

(ಎನ್. ಎಚ್. ಶಿವಶಂಕರ ರೆಡ್ಡಿ)
ಕೃಷಿ ಸಚಿವರು

ಅನುಬಂಧ **LCQ-820**

2017–18ನೇ ಸಾಲಿನಲ್ಲಿ ತುಮೂಕುರು ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಪ್ರಧಾನಮಂತ್ರಿ ಫಸಲ್ ಬೀಮಾ (ವಿಮಾ) ಯೋಜನೆಯಡಿ ತೋಟಗಾರಿಕೆ ಬೆಳೆಗಳಿಗೆ ನೋಂದಣಿಯಾದ ರೈತರ ಮತ್ತು ಬೆಳೆ ವಿಮೆ ಪರಿಹಾರದ ವಿವರ

ಬೆಳೆ	ತಾಲ್ಲೂಕು	ನೋಂದಣಿಯಾದ ರೈತರ ಸಂಖ್ಯೆ	ರೈತರ ಕಂತು (ಮೊತ್ತ ರೂ ಲಕ್ಷಗಳಲ್ಲಿ)	ರಾಜ್ಯದ ಪಾಲಿನ ವಿಮಾ ಕಂತು(ಮೊತ್ತ ರೂ ಲಕ್ಷಗಳಲ್ಲಿ)	ಲೆಕ್ಕಾಚಾರ ಹಾಕಲಾದ ವಿವರ (ಮೊತ್ತ ರೂ ಲಕ್ಷಗಳಲ್ಲಿ)		ಬೆಳೆ ವಿಮೆ ಪರಿಹಾರ ವಿತರಿಸಲಾದ (ಮೊತ್ತ ರೂ ಲಕ್ಷಗಳಲ್ಲಿ)		ಬೆಳೆ ವಿಮೆ ಪರಿಹಾರ ವಿತರಿಸಲು ಬಾಕಿ ಇರುವ ವಿವರ (ಮೊತ್ತ ರೂ ಲಕ್ಷಗಳಲ್ಲಿ)	
					ಫಲಾನುಭವಿಗಳ ಸಂಖ್ಯೆ	ಮೊತ್ತ	ಫಲಾನುಭವಿಗಳ ಸಂಖ್ಯೆ	ಮೊತ್ತ	ಫಲಾನುಭವಿಗಳ ಸಂಖ್ಯೆ	ಮೊತ್ತ
ಟೊಮ್ಯಾಟೊ (ಎನ್.ಎಸ್.)	ತುಮಕೂರು	1	0.23	0.02	1	0.16	1	0.16	0	0
	ಚಿಕ್ಕನಾಯಕನಹಳ್ಳಿ	193	4.95	4.86	193	8.11	193	8.11	0	0
	ಕುಣಿಗಲ್	33	0.65	0.65	33	3.42	33	3.42	0	0
	ತುರುವೇಕೆರೆ	6	0.041	0.04	6	0.115	0	0	6	0.115
ಈರುಳ್ಳಿ (ಮ.ಆ)	ಸಿರ	19	0.51	0.62	19	5.07	0	0	19	5.07
ಮೆಣಸಿನಕಾಯಿ (ನೀ)	ಮದುಗಿರಿ	34	0.64	0.48	34	2.2	34	2.2	0	0
ಮೆಣಸಿನಕಾಯಿ (ಮ.ಆ)	ಚಿಕ್ಕನಾಯಕನಹಳ್ಳಿ	52	0.82	1.9	52	11.42	52	11.42	0	0
ಒಟ್ಟು		**338**	**7.841**	**8.57**	**338**	**30.5**	**313**	**25.31**	**25**	**5.185**